**SC No. 219/2022**
**P.W. 2**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 219/2022 P.W. 2**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **28.02.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಆದೇಶ ದಿನಾಂಕ **31.01.2026** ರಂತೆ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **DML** ವಕೀಲರಿಂದ :</u>

ನಾಮ್ಮ ಮೇಲಾಧಿಕಾರಿಗಳ ಚೇಂಬರ್ ನಲ್ಲಿ ನಾನು ಸುಮಾರು 30 ನಿಮಿಷ ಇದ್ದೆ. ಪಂಚ ಸಾಕ್ಷಿದಾರರನ್ನು ನಾನು ಹೋದ ನಂತರ ಕರೆಸಿದ್ದರು. HC ಮಹೇಶ ರವರು ಫೋನ್ ಮೂಲಕ ಪಂಚ ಸಾಕ್ಷಿದಾರರನ್ನು ಕರೆಸಿದ್ದರು. HC ಮಹೇಶ ರವರಿಗೆ ಆ ಪಂಚ ಸಾಕ್ಷಿದಾರರ ಪರಿಚಯ ಇತ್ತು. ಸದರಿ ಪಂಚರು ನಮ್ಮ ಪೊಲೀಸ್ ಇಲಾಖೆಯ ಸರಕು ಸಾಕ್ಷಿಗಳು ಎಂದರೆ ಸರಿ ಅಲ್ಲ. ನಮ್ಮ ಕಛೇರಿಯಿಂದ ಘಟನಾ ಸ್ಥಳಕ್ಕೆ ಹೋಗಲು ಸುಮಾರು 1 ಗಂಟೆ ಸಮಯ ಬೇಕು. ನಾವು ಸ್ಥಳದಲ್ಲಿ ಕಾಯತ್ತಾ ನಿಂತಿದ್ದಾಗ ಸುಮಾರು 6 – 7 ವಾಹನಗಳು ಅಲ್ಲಿ ಹೋದವು. ಆ ಸಮಯದಲ್ಲಿ ಯಾವುದೇ ಸಾರ್ವಜನಿಕರು ಓಡಾಡುತ್ತಿರಲಿಲ್ಲ. ನಾವು ಕರ್ತವ್ಯಕ್ಕೆ ಹೋಗುವ ಬಗ್ಗೆ Movement Register ನಲ್ಲಿ ಬರೆದು ಹೋಗುತ್ತೇವೆ. ಮು.ಮಾ. ಗಳನ್ನು ವಶಕ್ಕೆ ಪಡೆಯುವ ಕಾಲಕ್ಕೆ ನಮ್ಮ ಪಿ.ಐ. ರವರು ಮಹಜರ್ ಗೆ ನನ್ನ ಸಹಿ ಪಡೆದಿದ್ದಾರೆ. ಎಷ್ಟು ಗಂಟೆಗೆ ಸಹಿ ಪಡೆದರು ಎಂದು ನಾನು ಹೇಳಿಲ್ಲ. ನನ್ನ ಹೇಳಿಕೆಯನ್ನು ಪಿ.ಐ. ರವರು ಎಷ್ಟು ಗಂಟೆಗೆ ದಾಖಲು ಮಾಡಿದ್ದರು ಎಂದು ಹೇಳಿಲ್ಲ. ನಾನು ಸ್ಥಳದಲ್ಲಿ 2 ½ ಗಂಟೆಗಳ ಕಾಲ ಇದ್ದೆ. ಆ ಸಮಯದಲ್ಲಿ ಯಾವುದೇ ಸಾರ್ವಜನಿಕರು ಓಡಾಡಿದ್ದನ್ನು ನಾನು ನೋಡಿಲ್ಲ. ಘಟನಾ ಸ್ಥಳದಲ್ಲಿ 150 -200 ಮೀಟರ್ ದೂರದಲ್ಲಿ ಮನೆಗಳು ಇವೆ. ಪಿ.ಐ. ರವರು ಆಸ್ಥಳದಲ್ಲಿ ಸುತ್ತ ಮುತ್ತ ಇದ್ದ ಮನೆಗಳ ವ್ಯಕ್ತಿಗಳನ್ನು ಕರೆಯಿಸಿ ಅವರ ಸಮಕ್ಷಮ ದಾಳಿ ಮಾಡಿದ ಬಗ್ಗೆ ಮಹಜರ್ ಬರೆದಿಲ್ಲ. ತಲಘಟ್ಟ ಪುರ ಠಾಣೆಗೆ ಪೊಲೀಸ್ ಅಧಿಕಾರಿ ನಮೂದಿಸಿದ ಆ ವಸ್ತುಗಳನ್ನು ತೆಗೆದಕೊಂಡ ಬಗ್ಗೆ ಯಾವುದೇ ಮಹಜರ್ ಮಾಡಿಲ್ಲ. ನಾನು 4 ಜನ ಆರೋಪಿತರನ್ನು ನೋಡಿರಲಿಲ್ಲ ಮತ್ತು ಪಿ.ಐ. ರವರ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ದಾಳಿ ಮಹಜರ್ ಗೆ ಸಹಿ

**SC No. 219/2022**
**P.W. 2**

ಮಾಡಿಲ್ಲ ಎಂದರೆ ಸರಿ ಅಲ್ಲ. ನನಗೆ ಈ ಘಟನೆ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಪಿ.ಐ. ರವರ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.